# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **1105 (1255)** |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | **19-12-2024** |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗದಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದು ಯಾವಾಗ; ಅಧಿಸೂಚನೆ ಹೊರಡಿಸಿದ ನಂತರದಲ್ಲಿ ಪೂರ್ವಭಾವಿ ಪರೀಕ್ಷೆಯನ್ನು ನಡೆಸಿದ್ದು ಯಾವಾಗ; ಕೆ.ಎ.ಎಸ್ ಮರು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿದ್ದು ಯಾವ ಕಾರಣಕ್ಕಾಗಿ; | 2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಅಧಿಸೂಚನೆಯನ್ನು ದಿನಾಂಕ: 26-02-2024 ರಂದು ಹೊರಡಿಸಲಾಗಿದ್ದು, ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ: 27-08-2024ರಂದು ನಡೆಸಲಾಗಿರುತ್ತದೆ.<br><br>ದಿನಾಂಕ:27.08.2024ರಂದು ನಡೆಸಿದ ಪೂರ್ವಭಾವಿ ಪರೀಕ್ಷೆಯಲ್ಲಿನ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಕೆಲವು ಪ್ರಶ್ನೆಗಳಲ್ಲಿ ಭಾಷಾಂತರ ಲೋಪ ಕಂಡುಬಂದಿದೆಯೆಂದು ಪರೀಕ್ಷೆಗೆ ಹಾಜರಾದ ಹಲವಾರು ಅಭ್ಯರ್ಥಿಗಳು ತೀವ್ರವಾಗಿ ಪ್ರತಿಭಟನೆಯನ್ನು ನಡೆಸಿದ ಹಿನ್ನೆಲೆಯಲ್ಲಿ ದಿನಾಂಕ:29.12.2024 ರಂದು ಮರುಪರೀಕ್ಷೆಯನ್ನು ನಡೆಸಲು ನಿರ್ಧರಿಸಲಾಗಿರುತ್ತದೆ. |
| ಆ | ಆಗಸ್ಟ್ 27ರಂದು ನಡೆದ ಕೆ.ಎ.ಎಸ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಉಂಟಾದ ಲೋಪದೋಷಗಳು ಏನು; ಈ ಲೋಪದೋಷಗಳನ್ನು ಪತ್ತೆ ಹಚ್ಚಲು ಆಯೋಗವು ಸಿದ್ಧಪಡಿಸಿರುವ ವರದಿಯ ಕುರಿತು ವಿವರ ನೀಡುವುದು. | ದಿನಾಂಕ:27.08.2024ರಂದು ಆಯೋಗವು ನಡೆಸಿದ ಪೂರ್ವಭಾವಿ ಪರೀಕ್ಷೆಯ ಕುರಿತು ಆಯೋಗವು ಸರ್ಕಾರಕ್ಕೆ ವರದಿಯನ್ನು ನೀಡಿದ್ದು ವಿವರ ಕೆಳಕಂಡಂತಿದೆ.<br><br>1. ಪರೀಕ್ಷೆಗೆ ಹಾಜರಾದ 1,31,855 ಅಭ್ಯರ್ಥಿಗಳಲ್ಲಿ ಪತ್ರಿಕೆ-1 ಮತ್ತು ಪತ್ರಿಕೆ-2ಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಅನುಕ್ರಮವಾಗಿ, 109 ಮತ್ತು 97 ಅಭ್ಯರ್ಥಿಗಳು ಕನ್ನಡ ಭಾಷಾಂತರದಲ್ಲಿ ಉಂಟಾಗಿರುವ ಲೋಪದ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.<br>2. ಆಯೋಗವು 2021ನೇ ಸಾಲಿನಲ್ಲಿ ಪ್ರಶ್ನೆಗಳ ಸೋರಿಕೆಯ ಹಿನ್ನೆಲೆಯಲ್ಲಿ ರಚಿಸಲಾಗಿದ್ದ ಉಪಸಮಿತಿಯು ಭಾಷಾಂತರಕಾರರು ಭಾಷಾಂತರಿಸಿರುವ ಪ್ರಶ್ನೆಗಳನ್ನು ಗೋಪ್ಯ ಶಾಖೆಯ ಅಧಿಕಾರಿ/ಸಿಬ್ಬಂದಿಗಳು ನೋಡುವ ಅವಕಾಶ ಇರಕೂಡದೆಂದು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ಪ್ರಶ್ನೆಗಳನ್ನು ಆಯೋಗದಿಂದ ಪರಿಶೀಲಿಸಿರುವುದಿಲ್ಲ. |

| | | |
|---|---|---|
| | | 3. ಪ್ರಶ್ನೆಗಳ ಕನ್ನಡ ಭಾಷಾಂತರದಲ್ಲಿನ ಲೋಪಗಳನ್ನು ಪರಿಶೀಲಿಸಲು, ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳ ದರ್ಜೆಯಲ್ಲಿರುವಂತಹ ಸರಾಸರಿ 15 ವರ್ಷಗಳಿಗೂ ಅಧಿಕ ಸೇವಾನುಭವವನ್ನು ಹೊಂದಿರುವ ಹಾಗು ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳ ಮೂವರು ವಿಷಯ ತಜ್ಞರುಗಳನ್ನೊಳಗೊಂಡ ಒಟ್ಟು 11 ಸಮಿತಿಗಳನ್ನು ರಚಿಸಲಾಗಿರುತ್ತದೆ.<br>4. ಪ್ರಶ್ನೆಯನ್ನು ಸಿದ್ಧಪಡಿಸಿದ ವಿಷಯ ತಜ್ಞರು ಹಾಗೂ ಭಾಷಾಂತರ ಇಲಾಖೆಯ ಭಾಷಾಂತರಕಾರರು ಪ್ರಶ್ನೆಗಳನ್ನು ಭಾಷಾಂತರಿಸಿ ನೀಡಿರುತ್ತಾರೆ.<br>5. ಸದರಿ ಸಮಿತಿಯ ವಿಷಯ ತಜ್ಞರುಗಳು ಪ್ರಶ್ನೆಗಳ ಭಾಷಾಂತರವನ್ನು ಪರಿಶೀಲಿಸಿ, ಭಾಷಾಂತರದ ಲೋಪದಿಂದಾಗಿ ಪತ್ರಿಕೆ-1ರಲ್ಲಿ 05 ಪ್ರಶ್ನೆಗಳಿಗೆ ಹಾಗೂ ಪತ್ರಿಕೆ-2ರಲ್ಲಿನ 05 ಪ್ರಶ್ನೆಗಳ ಕೀ-ಉತ್ತರಗಳು ಪರಿಷ್ಕೃತಗೊಳ್ಳಲಿವೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ಸರ್ಕಾರದ ಹಂತದಲ್ಲಿ ಹಲವಾರು ಸಭೆಗಳನ್ನು ನಡೆಸಿ, ಆಯೋಗದಲ್ಲಿ ಪರಿಣಿತ ಭಾಷಾಂತರಕಾರರಿಗೆ ಜವಾಬ್ದಾರಿ ನೀಡುವುದು ಹಾಗೂ ಭಾಷಾಂತರವನ್ನು ಖಚಿತಗೊಳಿಸಲು ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದವರನ್ನು ಜವಾಬ್ದಾರರನ್ನಾಗಿ ಮಾಡಲು ಕ್ರಮವಹಿಸುವುದು ಮತ್ತು ಮುಂದಿನ ದಿನಗಳಲ್ಲಿ ಈ ರೀತಿ ಲೋಪದೋಷಗಳಾಗದಂತೆ ಜಾಗರೂಕತೆಯಿಂದ ಮತ್ತು ಪಾರದರ್ಶಕತೆಯಿಂದ ಪರೀಕ್ಷೆಗಳನ್ನು ನಡೆಸುವಂತೆ ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. |
| ಇ | ಸದರಿ ಪರೀಕ್ಷೆಯನ್ನು ನಡೆಸಲು ಉಂಟಾದ ಖರ್ಚು ಎಷ್ಟು; ಖರ್ಚಿನ ವಿವರಗಳೊಂದಿಗೆ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟ ಉಂಟು ಮಾಡಿದೆ ಹಾಗೂ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ಕೈಗೊಂಡ ಕ್ರಮಗಳ ಕುರಿತು ಮಾಹಿತಿಯನ್ನು ಒದಗಿಸುವುದು) | 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆಗೆ ಆಯೋಗವು ಖರ್ಚು ಆದಿರುವ ಅಂದಾಜು ವೆಚ್ಚ ರೂ. 13,40,38,388/-ಗಳಾಗಿರುತ್ತದೆ. (ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)<br><br>ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಅತ್ಯಂತ ಜಾಗರೂಕತೆಯಿಂದ ಮತ್ತು ಪಾರದರ್ಶಕತೆಯಿಂದ ಪರೀಕ್ಷೆಗಳನ್ನು ನಡೆಸುವಂತೆ ಆಯೋಗಕ್ಕೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. |

| | | |
|---|---|---|
| ಈ | ಮೊದಲ ಬಾರಿ ನಡೆದ ಪರೀಕ್ಷೆಯನ್ನು ರದ್ದುಪಡಿಸಿ, ಸರ್ಕಾರವು ಮರುಪರೀಕ್ಷೆಯನ್ನು ನಡೆಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ಯಥಾ ಸ್ಥಿತಿ ಕಾಪಾಡುವಂತೆ ಆದೇಶವಾಗಿದ್ದು, ಈ ಆದೇಶವನ್ನು ಹಿಂಪಡೆಯುವ ನಿಟ್ಟಿನಲ್ಲಿ ಸರ್ಕಾರವು ಸರ್ಕಾರಿ ವಕೀಲರನ್ನು ನೇಮಿಸಿದೆಯೇ; (ಈ ಕುರಿತು ಮಾಹಿತಿಯನ್ನು ಒದಗಿಸುವುದು) | ಮರು ಪರೀಕ್ಷೆಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:106087/2024 ದಾಖಲಾಗಿದ್ದು, ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರಿ ವಕೀಲರನ್ನು ನೇಮಿಸಲಾಗಿದ್ದು, ತಡೆಯಾಜ್ಞೆ ತೆರವುಗೊಳಿಸಲು ಆಯೋಗದವತಿಯಿಂದ ಕ್ರಮವಹಿಸಲಾಗುತ್ತಿದೆ. |
| ಉ | ಉ) ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆದು, ಕೆಎಎಸ್ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಜೊತೆಗೆ ಒಳಮೀಸಲಾತಿಯನ್ನೂ ಅನ್ವಯಿಸಿ ಮರು ಅಧಿಸೂಚನೆ ಹೊರಡಿಸುವ ಆಲೋಚನೆಯೇನಾದರೂ ಇದೆಯೇ; ಇದ್ದಲ್ಲಿ, ಈ ಕುರಿತು ಲಕ್ಷಾಂತರ ಅಭ್ಯರ್ಥಿಗಳ ಗೊಂದಲವನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು? (ವಿವರವನ್ನು ನೀಡುವುದು) | ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸಿ, ಒಳಮೀಸಲಾತಿಯನ್ನೂ ಅನ್ವಯಿಸಿ ಮರು ಅಧಿಸೂಚನೆ ಹೊರಡಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ:ಸಿಆಸುಇ 308 ಎಸ್‌ಎಸ್‌ಸಿ 2024**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

# ಅನುಬಂಧ

| ಕ್ರ ಸಂ | ವಿವರ | ರೂ.ಗಳಲ್ಲಿ |
|---|---|---|
| 01 | 29 ಜಿಲ್ಲೆಗಳ ಜಿಲ್ಲಾಧಿಕಾರಿ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 38,38,800.00 |
| 02 | 29 ಜಿಲ್ಲೆಗಳ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 4,20,500.00 |
| 03 | 29 ಜಿಲ್ಲೆಗಳ ಖಜಾನಾಧಿಕಾರಿ/ಕಚೇರಿ ಸಿಬ್ಬಂದಿಗಳ ಸಂಭಾವನೆ ಮೊತ್ತ | 3,82,800.00 |
| 04 | 564 ಪರೀಕ್ಷಾ ಉಪಕೇಂದ್ರಗಳ ಸಂಭಾವನೆ ಮೊತ್ತ | 4,18,60,986.00 |
| 05 | ಪರೀಕ್ಷಾ ಕಾರ್ಯ ನಿರ್ವಹಿಸಿದ ಆಯೋಗದ ಅಧಿಕಾರಿ/ಸಿಬ್ಬಂದಿಗಳ ಸಂಭಾವನೆ ಮೊತ್ತ | 13,99,900.00 |
| 06 | ಆಯೋಗದಿಂದ ಅಂಗವಿಕಲ ಅಭ್ಯರ್ಥಿಗಳಿಗೆ ಒದಗಿಸಲಾದ ಲಿಪಿಕಾರರ ಸೌಲಭ್ಯಕ್ಕಾಗಿ ನೀಡಲಾದ ಸಂಭಾವನೆ ಮೊತ್ತ | 4,21,608.00 |
| 07 | ಸ್ಥಳೀಯ ನಿರೀಕ್ಷಣಾಧಿಕಾರಿಯಾಗಿ ಬೆಂಗಳೂರು ಪರೀಕ್ಷಾ ಉಪಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಂಭಾವನೆ ಮೊತ್ತ | 1,44,000.00 |
| 08 | ಕ್ಲೋಸ್ಡ್ ಕಂಟೇನರ್ ವಾಹನಗಳ ಬಾಡಿಗೆ ವೆಚ್ಚ | 9,89,214.00 |
| 09 | ಲಘುವಾಹನಗಳ ಬಾಡಿಗೆ ವೆಚ್ಚ | 6,40,602.00 |
| 10 | ವಿ.ಆರ್.ಎಲ್ ಕೋರಿಯರ್ ಸೇವೆಯ ವೆಚ್ಚ | 2,84,557.00 |
| 11 | ಪರೀಕ್ಷಾ ಕೈಪಿಡಿ ಮತ್ತು ಇತರೆ ಮಾರ್ಗಸೂಚಿಗಳ ಮುದ್ರಣ ವೆಚ್ಚ | 9,78,928.00 |
| 12 | ಪೋಲಿಸ್ ಬೆಂಗಾವಲು ಪಡೆ ಸೇವೆಯನ್ನು ಒದಗಿಸಿದ ವೆಚ್ಚ | 5,00,000.00 |
| 13 | ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾದ ಅಧಿಕಾರಿ/ಸಿಬ್ಬಂದಿಯವರಿಗೆ ಕಾಫಿ/ಟೀ/ಊಟ/ತಿಂಡಿ ವೆಚ್ಚವಾಗಿರುವ ಅಂದಾಜು ಮೊತ್ತ | 3,50,000.00 |
| 14 | ಜಾಮರ್ಸ್ ಅಳವಡಿಸುವ ಕಾರ್ಯನಿರ್ವಹಣೆ | 22,82,139.00 |
| 15 | ಫ್ರಿಸ್ಕಿಂಗ್ | 52,72,750.00 |
| 16 | ಫೇಸ್ ರೆಕಗ್ನಿಷನ್ | 48,50,930.00 |
| 17 | ಸಿ.ಸಿ ಕ್ಯಾಮರಾ ಅಳವಡಿಸುವುದು | 1,58,88,000.00 |
| 18 | ಗೌಪ್ಯ ಸಾಮಾಗ್ರಿಗಳ ಮುದ್ರಣ ವೆಚ್ಚ | 5,35,32,674.00 |
| | **ಒಟ್ಟು** | **13,40,38,388.00** |